ಪ್ರಸವ ಮಂದಿರ ಆಗುವುದನ್ನು ತಪ್ಪಿಸುತ್ತೀರೆಂಬುದನ್ನು ಮಾನ್ಯ ಮಂತ್ರಿಗಳು ಖಚಿತವಾಗಿ ತಿಳಿಸಬೇಕು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೧೯೯೦ರ ಸೆಪ್ಟೆಂಬರ್ ಅಂತ್ಯದವರೆಗೆ ಕಟ್ಟಡಕ್ಕೆ ೫೨.೭೭ ಲಕ್ಷ ಖರ್ಚಾಗಿದ್ದು, ಮುಖ್ಯ ಆಸ್ಪತ್ರೆ ಕಟ್ಟಡ ಪೂರ್ಣವಾಗಿ ಆಗಿಹೋಗಿದೆ. ಇದು ಜಿಲ್ಲಾಪರಿಷತ್ತಿನವರು ಹೇಳಿದಹಾಗೆ ಕಂಟ್ರಾಕ್ಟರುಗಳಿಗೆ ಹಣ ಕೊಡದೆ ಏನೋ ಅವರಿವರಿಗೆ ಸ್ವಲ್ಪ ವಿರಸ ಬಂದು ಈ ಕಟ್ಟಡ ಕೆಲಸ ನಿಂತಿತ್ತು. ಈಗ ಅಲ್ಪ ಸ್ವಲ್ಪ ಕೆಲಸ ಬಾಕಿ ಇದೆ. ನೀರಿನ ಸರಬರಾಜು ವಿದ್ಯುಚ್ಛಕ್ತಿ ಪೂರೈಕೆ ಶವಪರೀಕ್ಷೆ ಕೊಠಡಿ ಹೀಗೆ ಸಣ್ಣಪುಟ್ಟ ಕೆಲಸಗಳು ಬಾಕಿ ಇದೆ. ಇದನ್ನು ಪುನಃ ಜಿಲ್ಲಾಪರಿಷತ್ತಿನವರಿಗೆ ಮಾಗಿಸುತ್ತಾರೋ ಇಲ್ಲವೋ ಎಂದು ಕೇಳಿದ್ದೇವೆ. ಅವರು ಮಾಗಿಸಿನೆ ಹೋದರೆ ಅದಕ್ಕೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಇದು ಮುಗಿದ ತಕ್ಷಣ ನಾವು ಆಸ್ಪತ್ರೆಯ ಕಟ್ಟಡ ತೆಗೆದು ಕೊಂಡು ಅದನ್ನು ಪ್ರಸವ ಮಂದಿರವಾಗಿ ಮಾಡಿ ನಾವು ಕೆಲಸವನ್ನು ಶುರು ಮಾಡುತ್ತೇವೆ.

ಶ್ರೀ ಡಿ. ಹುಲಿಗೇಗೌಡ.—ಈಗ ಇದ್ದ ವಾಗಿರುವ ಆಸ್ಪತ್ರೆಯ ಕಟ್ಟಡ ಪ್ರಸವಿ ಮಂದಿರಕ್ಕಿಂತಲೂ ಚೆನ್ನಾಗಿದೆ. ಆದ್ದರಿಂದ ಅಲ್ಲಿಗೆ ಕೂಡಲೇ ಆಸ್ಪತ್ರೆಯನ್ನು ಸ್ಥಳಾಂತರಿಸಬೇಕು ಎಂಬುದು ನನ್ನ ಪ್ರಶ್ನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗೇ ಕಟ್ಟಡದ ಕೆಲಸ ಅರ್ಧಂಬರ್ಧವಾಗಿದ್ದಾಗ ನಾವು ಆಸ್ಪತ್ರೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕಟ್ಟಡದ ಕೆಲಸ ಮುಗಿದ ಮೇಲೆ ಅವರು ಕಟ್ಟಡವನ್ನು ನಮಗೆ ವಹಿಸಿ ಕೊಡಬೇಕು. ಆದಾದ ಮೇಲೆ ಆಸ್ಪತ್ರೆಯನ್ನು ಸ್ಥಳಾಂತರಿಸಬಹುದು.

ಅಧ್ಯಕ್ಷರು.—ಇಲ್ಲದಿದ್ದರೆ ಪ್ರಸವಾಸಿ ಮಂದಿರವನ್ನೇ ಆಸ್ಪತ್ರೆಗೆ ಶಿಫ್ಟ್ ಮಾಡಿಬಿಡಿ. ಅದನ್ನೇ ಖಾಯಂ ಆಗಿ ಆಸ್ಪತ್ರೆ ಮಾಡಿಬಿಡಿ.

ಮಾಗಡಿ ತಾಲ್ಲೂಕ್‌ಗೆ ಬೇಕಾಗಿರುವ ನ್ಯಾಯಬೆಲೆ ಅಂಗಡಿಗಳ ಬಗ್ಗೆ

(೩೧೦) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) —ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಮಾಗಡಿ ತಾಲ್ಲೂಕಿಗೆ ಇನ್ನೂ ಅವಶ್ಯಕವಾಗಿ ಬೇಕಾಗಿರುವ ಪಡಿತರ ಅಂಗಡಿಗಳ ಸಂಖ್ಯೆ ಎಷ್ಟು ?

(ಆ) ಅವು ಯಾವ ಯಾವ ಸ್ಥಳಗಳಲ್ಲಿ ಬೇಕಾಗಿರುತ್ತದೆ ?

(ಇ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಕುಟುಂಬಗಳಿಗೆ ಇನ್ನೂ ಹೊಸರು ಪಡಿತರ ಚೀಟಿಗಳನ್ನು ಹಂಚಬೇಕಾಗಿದೆ.

(ಈ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)—

(ಅ) ಇನ್ನು ಗಣತಿ ಮಾಡಬೇಕಾಗಿದೆ.

(ಆ) ಉದ್ಭವಿಸುವುದಿಲ್ಲ.

(ಇ) ಗಣತಿ ಮಾಡಬೇಕಾಗಿದೆ.

(ಈ) ಗಣತಿಯ ನಂತರ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್. ಎಂ. ರೇವಣ್ಣ.—ಈ ಪ್ರಶ್ನೆಗೆ ಇನ್ನೂ ಜನಗಣತಿ ಕಾರ್ಯ ಮಾಡಬೇಕಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಜನಗಣತಿ ಆಧಾರದ ಮೇಲೆ ಪೈನ್ ಶಾಪ್‌ಗಳು ಒಂದು ತಾಲ್ಲೂಕಿಗೆ ಇಷ್ಟೆಂದು ಕೊಡುವ ಪದ್ಧತಿ ಇದ. ಹಾಗೆಯೆ ಆಹಾರ ಧಾನ್ಯದ ಹಂಚಿಕೆ ಬಗ್ಗೆ ೫೦೦ ಕಾರ್ಡುಗಳಿಗೆ ಒಂದು ಅಂಗಡಿಯಂತೆ ಅಥವಾ ಯಾವ ರೀತಿ ಕೊಡುತ್ತೀರೆಂದು ತಿಳಿಸಬೇಕು ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಇವರ ನಾಲ್ಕು ಪ್ರಶ್ನೆಗಳಿಗೆ ಸರ್ಕಾರದ ವತಿಯಿಂದ ಉತ್ತರ ಹೋಗಿದೆ. ನಿರ್ದಿಷ್ಟವಾಗಿ ಈ ಪ್ರಶ್ನೆಯ ಎ, ಬಿ, ಸಿ, ಡಿ ಯಲ್ಲಿ ತಮಗೆ ಅನುಮಾನವೇನಾದರೂ ಇದ್ದರೆ ಕೇಳಿ ನಾನು ಸ್ಪಷ್ಟೀಕರಣ ನೀಡುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ.—ಜನಗಣತಿ ಮಾಡಿಲ್ಲವೆಂದು ಹೇಳಿದ್ದಾರೆ. ಈಗ ಇರುವ ಮಾಹಿತಿಯ ಪ್ರಕಾರ ಅಲ್ಲಿಗೆ ಎಷ್ಟು ಅಂಗಡಿಗಳು ಬೇಕಾಗುತ್ತದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಮೀಕ್ಷೆ ಮಾಡುವ ಕಾರ್ಯ ಜಿಲ್ಲಾ ಪರಿಷತ್‌ನವರ ದ್ದಾಗಿದ್ದು, ಇತ್ತೀಚೆಗೆ ಈ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುತ್ತೇವೆ. ಅವರು ಹೊಸದಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸಮೀಕ್ಷೆ ನಡೆಸಿ ಸರ್ಕಾರಕ್ಕೆ ಒಂದು ವರದಿ ಯನ್ನು ಕೊಡಲು ತಿಳಿಸಿದ್ದೇವೆ. ಆ ವರದಿ ಬಂದ ನಂತರ ತಮ್ಮ ಬಯಕೆಯನ್ನು ಈಡೇರಿಸಲು ಸರ್ಕಾರ ಆದಷ್ಟು ಬೇಗ ಪ್ರಯತ್ನ ಮಾಡುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ.—ಕಳೆದ ೧೫ನೇ ತಾರೀಖಿನಿಂದ ಈ ಕೆಲಸವನ್ನು ಸರ್ಕಾರ ಜಿಲ್ಲಾ ಪರಿಷತ್‌ನವರಿಂದ ತೆಗೆದುಕೊಂಡಿದೆ. ಆದಕ್ಕೆ ಮುಂಚೆ ಜಿಲ್ಲಾ ಪರಿಷತ್‌ನವರು ಹೆಚ್ಚಾಗಿ ಫೇರ್ ಪ್ರೈಸ್ ಡಿಪೋಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇದಕ್ಕೆ ರಿಪ್ಲೈ ಕೊಟ್ಟಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನಾನು ತಮ್ಮನ್ನು ಕರೆದಾಗ ತಾವು ಇರಲಿಲ್ಲ...

ಶ್ರೀ ಸಿ. ಬೈರೇಗೌಡ.—ನಾನು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದೆ ಇದು ಬಹಳ ಮುಖ್ಯ ವಾದ ಪ್ರಶ್ನೆ.

ಅಧ್ಯಕ್ಷರು.—ನಮಗೆ ಎಲ್ಲಾ ಪ್ರಶ್ನೆಗಳೂ ಮುಖ್ಯವಾದದ್ದೇ ಮುಖ್ಯ, ಅಮುಖ್ಯವೆಂಬುದು ಇಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಣೆಬೆನ್ನೂರು ಜನರಲ್ ಆಸ್ಪತ್ರೆಯ ವಿಸ್ತರಣೆ ಬಗ್ಗೆ

೧೯೬. ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಣೆಬೆನ್ನೂರು ಜನರಲ್ ಆಸ್ಪತ್ರೆಯನ್ನು ೩೦ ಹಾಸಿಗೆಯಿಂದ ೫೦ ಹಾಸಿಗೆಗಳಿಗೆ ವಿಸ್ತರಿಸಲು ಮುಖ್ಯ ಮಂತ್ರಿಗಳು ಅಶ್ವಾಸನೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದರ ಒಟ್ಟು ವೆಚ್ಚ ಎಷ್ಟಾಗುತ್ತದೆ ? ಮತ್ತು ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ಹೌದು

ಆ) ಅಂದಾಜು ರೂ. ೨೬.೫೦ ಲಕ್ಷಗಳು ಹಣದ ಲಭ್ಯತೆಯನ್ನು ಅನುಸರಿಸಿ ಮುಂಜೂರಾತಿ ಯನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ವಿಕ್ಟೋರಿಯಾ ಆಸ್ಪತ್ರೆಗೆ ಬೇಕಾದ ಎಕ್ಸ್‌ರೇ ಯಂತ್ರಗಳ ಬಗ್ಗೆ

೧೯೫. ಶ್ರೀ ಸಿ. ಬೈರೇಗೌಡ (ವೇಮಗಲ್). —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಕ್ಟೋರಿಯಾ ಆಸ್ಪತ್ರೆಗೆ ಬೇಕಾದ ಬೇರೆ ಬೇರೆ ನಮೂನೆಯ ಎಕ್ಸರೇ ಯಂತ್ರಗಳೆಷ್ಟು ?

ಆ) ಈಗಾಗಲೇ ಸ್ಥಾಪಿಸಿದ ಯಂತ್ರಗಳೆಷ್ಟು, ಅವುಗಳಲ್ಲಿ ಎಷ್ಟು ಯಂತ್ರಗಳು ಪ್ರಯೋಜನ ಸ್ಥಿತಿಯಲ್ಲಿವೆ ?

ಇ) ಎಷ್ಟು ಯಂತ್ರಗಳು ಹಾಳಾಗಿವೆ ಮತ್ತು ಯಾವ ಯಾವ ಯಂತ್ರಗಳು ಎಂದಿನಿಂದ ಹಾಳಾಗಿವೆ ?